**2019 IV 13** **0930** **Seat No.** | | | | | |

**Time : 2½ Hours** **KANNADA (T.L.)**

**Subject Code**

**S 1 3 6**

**Total No. of Questions : 10** **(Printed Pages : 8)** **Maximum Marks : 80**

**ಸೂಚನೆ :** (*i*) ಪ್ರತಿಯೊಂದು ಪ್ರಶ್ನೆಯನ್ನು ಒಂದು ಹೊಸಪುಟದ ಮೇಲೆ ಬರೆಯಿರಿ.

(*ii*) ಪ್ರತಿ ಪ್ರಶ್ನೆಯ ಸಂಖ್ಯೆ ಮತ್ತು ಉಪಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.

(*iii*) ಎಲ್ಲ ಪ್ರಶ್ನೆಗಳನ್ನು ಬಿಡಿಸುವುದು ಅವಶ್ಯವಾಗಿದೆ.

1. (ಅ) ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಯೋಗ್ಯವಾದ **ಒಂದನ್ನು** ಆರಿಸಿ ವಾಕ್ಯ ಪೂರ್ಣಮಾಡಿ ಬರೆಯಿರಿ. 2

(1) ಜೋಗ ಜಲಪಾತಕ್ಕೆ ಬರಲು ಉತ್ತಮ ರಸ್ತೆ, ತಂಗಲು ಉತ್ತಮ ದರ್ಜೆಯ ವಸತಿ ಹೋಟೆಲಗಳ ವ್ಯವಸ್ಥೆಯನ್ನು ಮಾಡಲಾಗಿದೆ ಏಕೆಂದರೆ......

(*i*) ಆ ಸ್ಥಳಕ್ಕೆ ರಸ್ತೆ ಬೇಕು ಎಂದು ಬೇಡಿಕೆ ಇದ್ದುದರಿಂದ.

(*ii*) ಸುಂದರ ನಿಸರ್ಗ ತಾಣವನ್ನು ನೋಡಿ ಮನ ತಣಿಯಲು.

(*iii*) ಜನರ ಅನುಕೂಲತೆಗಳನ್ನು ಪೂರೈಸಲು.

(2) ಯಂಕಣ್ಣನು ಅತ್ತೆ ಮನೆಗೆ ಸೀರೆ, ಕುಪ್ಪಸ ಪರಾಳಗಳನ್ನು ಕೊಡಲು ಹೊರಟಿದ್ದನು ಏಕೆಂದರೆ .......

(*i*) ಯಂಕಣ್ಣನು ಹೆಂಡತಿಗೆಂದು ಎಲ್ಲ ವಸ್ತುಗಳನ್ನು ತೆಗೆದು ಕೊಂಡಿದ್ದನು.

(*ii*) ಯಂಕಣ್ಣನು ಅತ್ತೆ ಆ ವಸ್ತುಗಳನ್ನು ತರಲು ಹೇಳಿದ್ದಳು.

(*iii*) ಅತ್ತೆ ನವರಾತ್ರಿ ಆಚರಿಸಿದರು. ಬಾಗಿನ ಕೊಡುವದು ವಾಡಿಕೆ ಆಗಿದ್ದರಿಂದ

(ಬ) ಕೆಳಗಿನ ಬೇಕಾದ **ನಾಲ್ಕು** ಮಾತುಗಳನ್ನು ಯಾರು-ಯಾರಿಗೆ ಹೇಳಿದರು/ಕೇಳಿದರು ಎಂದು ಬರೆಯಿರಿ. 4

(*i*) 'ಮೊನ್ನೆ ಸಾಲ ಮಾಡಿ ನಮ್ಮ ತಂದೆಗೆ ನಾಲ್ಕು ನೂರು ರೂಪಾಯಿಗಳನ್ನು ಕಳಿಸಿದೆ'.

(*ii*) 'ಎ.ಟಿ.ಎಮ್. ಎಂದರೇನು? ಸರ್'.

(*iii*) 'ಅತ್ತೆ ನೀವು ಕೋಪಿಸಿಕೊಳ್ಳುವದಿಲ್ಲ ಅಂದರೆ ನನಗೆ ಸಮಾಧಾನವಾಯಿತು'.

(*iv*) 'ಏನು ಹುಳಗಳಿಂದ ರೇಷ್ಮೆ ತಯಾರಿಸುತ್ತಾರೆಯೆ'.

(*v*) 'ಅಬ್ಬಾ! ಇಷ್ಟೆಲ್ಲ ಪ್ರಯೋಜನೆಗಳಿವೆಯೇ?'

(ಕ) ಕೆಳಗಿನ ಬೇಕಾದ ನಾಲ್ಕು ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ. 4

(1) ಓಝೋನ್ ಅಣುಗಳನ್ನು ನಾಶಪಡಿಸುವ ಅನಿಲಗಳು ಯಾವವು?

(2) ಹಂಪೆಯು ಯಾವ ಅರಸರ ರಾಜಧಾನಿಯಾಗಿತ್ತು?

(3) ಅಶೋಕನ ಮಕ್ಕಳ ಹೆಸರೇನು?

(4) ಈವರೆಗೆ ಮರಣೋತ್ತರವಾಗಿ ಎಷ್ಟು ಯೋಧರಿಗೆ 'ಪರಮ ವೀರ ಚಕ್ರ' ಪ್ರಾಪ್ತವಾಗಿದೆ?

(5) ಶಿವರಾಮ ಕಾರಂತರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ?

2. (ಅ) ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ **ಒಂದನ್ನು** ಆರಿಸಿ ಕೆಳಗಿನ ಬಿಟ್ಟ ಸ್ಥಳವನ್ನು ತುಂಬಿರಿ. 2

(*i*) ತರಕಾರಿಗಳಲ್ಲಿ ಶರೀರಕ್ಕೆ ಆಗತ್ಯವಿರುವ ............ಗಳು ಇರುತ್ತವೆ.(ಪ್ರೋಟಿನ್, ಜೀವಸತ್ವ, ಸ್ನಿಗ್ಧ ಪದಾರ್ಥ).

(*ii*) ಅವಂತಿ ರಾಜ್ಯದ ರಾಜಧಾನಿ ........... (ಉಜ್ಜಯನಿ, ಮಗಧ, ಪಾಟಲಿಪುತ್ರ).

(*iii*) ಜೋಗ ಜಲಪಾತವು ........... ಮೀ. ಎತ್ತರದಿಂದ ಧುಮುಕುವದು. (250, 293, 198).

(*iv*) ಶ್ರೀನಗರದ ಮೇಲೆ ............. ವಿಮಾನಗಳು ದಾಳಿ ಮಾಡಿದವು (ಸುಖೋಯ್, ರಫೇಲ್, ಸಾಬ್ರಿ).

(ಬ) ಕೆಳಗಿನ ಬೇಕಾದ **ಮೂರು** ಪ್ರಶ್ನೆಗಳಿಗೆ **ಮೂರು-ನಾಲ್ಕು** ವಾಕ್ಯದಲ್ಲಿ ಉತ್ತರ ಬರೆಯಿರಿ. 9

(1) ಗ್ರಾಮೀಣ ಬ್ಯಾಂಕು ಎಂದರೇನು? ಅದರ ಕಾರ್ಯವನ್ನು ವಿವರಿಸಿರಿ.

(2) ರಾಧಾಳು ಹುಬ್ಬುಗಂಟು ಹಾಕುತ್ತ ರಾಜುನಿಗೆ ಏನೆಂದು ಹೇಳಿದಳು?

(3) ಕಾರಂತರು ಆರಂಭಿಸಿದ 'ಬಾಲವನ' ಶಾಲೆಯ ಕುರಿತು ಬರೆಯಿರಿ.

(4) ಓಝೋನ ಪದರಿನ ರಕ್ಷಣೆ ಮಾಡುವದು ಹೇಗೆ?

(ಕ) ಕೆಳಗಿನ ಬೇಕಾದ **ಒಂದು** ಪ್ರಶ್ನೆಗೆ **ನಾಲ್ಕು-ಐದು** ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4

(1) ಜನಸಂಖ್ಯೆ ಸ್ಫೋಟದಿಂದ ಆಗುವ ದುಷ್ಪರಿಣಾಮಗಳನ್ನು ವಿವರಿಸಿರಿ.

(2) ಹಜಾರರಾಮನ ದೇವಾಲಯದ ಕುರಿತು ಬರೆಯಿರಿ.

3. (ಅ) ಕೆಳಗಿನ ಶಬ್ದಗಳ ಅರ್ಥ ಬರೆಯಿರಿ. 2

(*i*) ಅಭಿವೃದ್ಧಿ

(*ii*) ಸೂಕ್ತ

(*iii*) ವಿಹಾರ

(*iv*) ಮನೋಹರ

(ಬ) ಕೆಳಗಿನ ಶಬ್ದಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ. 2

(*i*) ಕಿರುಚು

(*ii*) ಸಾಹಸ

(ಕ) ಕೆಳಗಿನ ವಾಕ್ಯಗಳಲ್ಲಿನ ವಿಶೇಷಣ ಗುರುತಿಸಿ ಬರೆಯಿರಿ. 2

(*i*) ಕೋಗಿಲೆಯು ಇಂಪಾಗಿ ಹಾಡುತ್ತದೆ.

(*ii*) ದಾರಿಯಲ್ಲಿ ಬರುವಾಗ ದೊಡ್ಡ ಹಾವನ್ನು ಕಂಡೆನು.

(*iii*) ಮಹಾತ್ಮ ಗಾಂಧಿಯವರು ಶಿಸ್ತು ಪ್ರಿಯರಾಗಿದ್ದರು.

(*iv*) ರಸ್ತೆಯಲ್ಲಿ ನಡೆದ ಅಪಘಾತ ಭಯಂಕರವಾಗಿತ್ತು.

(ಡ) ಕೆಳಗಿನ ಶಬ್ದಗಳ ಸಂಧಿ ವಿಗ್ರಹಿಸಿ ಬರೆಯಿರಿ. 2

(*i*) ಬಂಡೆಗಲ್ಲು

(*ii*) ಇತ್ಯಾದಿ

(*iii*) ಮಹೇಂದ್ರ

(*iv*) ಹೂದೋಟ

4. (ಅ) ಕೆಳಗಿನ ಬೇಕಾದ **ನಾಲ್ಕು** ಪ್ರಶ್ನೆಗಳಿಗೆ **ಒಂದೊಂದೇ** ವಾಕ್ಯದಲ್ಲಿ ಉತ್ತರ ಬರೆಯಿರಿ. 2

(1) ಅಳಿಗಳ ಬಳಗ ಯಾವಾಗ ಬರುವದು?

(2) ಯಾವುದು ತಾಯಿಯ ಪಾದ ತೊಳೆದಿದೆ ಎಂದು ಮಗು ಹೇಳುತ್ತದೆ?

(3) ತಂದೆಗೆ ಯಾವುದು ಸಮಾನವಾಗಿದೆ?

(4) ಬೂದಿಯನ್ನು ನದಿಯಲ್ಲಿ ಹರಿಬಿಟ್ಟಾಗ ಯಾರ ಬಾಯನ್ನು ಸೇರುವದು?

(5) ನಮ್ಮ ದೇಶ ಎಲ್ಲಿ ಸಾಗಿದೆಯೆಂದು ಕವಿ ಹೇಳಿದ್ದಾನೆ?

(ಬ) ಕೆಳಗಿನ ಬೇಕಾದ **ಎರಡು** ಪ್ರಶ್ನೆಗಳಿಗೆ **ಎರಡು-ಮೂರು** ವಾಕ್ಯದಲ್ಲಿ ಉತ್ತರ ಬರೆಯಿರಿ. 6

(*i*) ಒಂದೇ ಗೊಂಚಲಿನ ಹಣ್ಣುಗಳು ಹೇಗಿರುತ್ತದೆ?

(*ii*) ಶಿಶುನಾಳ ಶರೀಫರ ಕೈಯಲ್ಲಿ ಬಿದಿರು ಏನಾಗುತ್ತದೆಂದು ಹೇಳಿದ್ದಾರೆ?

(*iii*) ರೈತರು ಹೊಲದಲ್ಲಿ ಯಾವ ರೀತಿ ಕೆಲಸ ಮಾಡುವರು?

5. (ಅ) ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ. 2

(*i*) ಅಜ್ಜ

(*ii*) ವೈದ್ಯರು

(*iii*) ಕಾಗದ

(*iv*) ದೇಶಭಕ್ತರು

(ಬ) ಕೆಳಗಿನ ಶಬ್ದಗಳ ಲಿಂಗ ಬದಲಿಸಿ ಬರೆಯಿರಿ. 2

(*i*) ಮಾಲಕಿ

(*ii*) ಅನಾಥ

(*iii*) ಸ್ತ್ರೀ

(*iv*) ಚೆಲುವೆ

(ಕ) ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ. 2

(*i*) ಸ್ವರ್ಗ

(*ii*) ಉತ್ಸಾಹ

(*iii*) ಜೀರ್ಣ

(*iv*) ಆರೋಹಣ

(ಡ) ಕೆಳಗಿನ ಬೇಕಾದ **ಎರಡು** ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ. 2

(*i*) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

(*ii*) ಅತಿ ಆಸೆ ಗತಿಗೇಡು.

(*iii*) ತಾಳಿದವನು ಬಾಳಿಯಾನು.

(ಇ) ಕೆಳಗಿನ ಶಬ್ದಗಳ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ. 2

(*i*) ಸರೋವರ

(*ii*) ತಾಯಿ

(*iii*) ಸೂರ್ಯ

(*iv*) ಆನಂದ

6. ಕೆಳಗಿನ ಯಾವುದಾದರು **ಒಂದು** ವಿಷಯದ ಕುರಿತು **ಹದಿನೈದು-ಇಪ್ಪತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ. 6

(*i*) ನಾನು ಮಂತ್ರಿಯಾದರೆ ..........

(*ii*) ಸೈಕಲ್ಲಿನ ಆತ್ಮಕಥೆ

(*iii*) ನಿಸರ್ಗ ರಮ್ಯ ಗೋವಾ

(*iv*) ಅಂತರ್ಜಾಲ (ಇಂಟರ್ ನೆಟ) ನಿಂದ ಆಗುವ ಲಾಭಗಳು

(*v*) ಬಾಲಗಂಗಾಧರ ತಿಲಕ

7. ಕೆಳಗಿನ ವಾಕ್ಯಾಂಶಗಳ ಸಹಾಯದಿಂದ **ಒಂದು** ಕಥೆಯನ್ನು ರಚಿಸಿ ಬರೆಯಿರಿ ಮತ್ತು ಅದಕ್ಕೆ ಯೋಗ್ಯವಾದ ತಲೆ ಬರಹ ನೀಡಿರಿ. 6

ಒಬ್ಬ ವ್ಯಾಪರಿ ಇದ್ದನು — ಕತ್ತೆ ಸಾಕಿದ್ದನು. — ವ್ಯಾಪಾರಕ್ಕೆ ಹೋಗುವಾಗ ಉಪಯೋಗ – – ದಾರಿಯಲ್ಲಿ ಹೊಳೆ –– ಕತ್ತೆಯು ಬೆನ್ನ ಮೇಲೆ ಉಪ್ಪನ್ನು ಹೇರಿದನು. — ಕತ್ತೆ ನೀರಿನಲ್ಲಿ ಬಿತ್ತು — ಉಪ್ಪು ಕರಗಿ ಭಾರ ಕಡಿಮೆಯಾಯಿತು. — ಕತ್ತೆಗೆ ಸಂತೋಷವಾಯಿತು. — ಕತ್ತೆ ಪುನಃ ಪುನಃ ಈ ಪ್ರಯೋಗ ಉಪಯೋಗಿಸಿತು — ವ್ಯಾಪಾರಿ ಹತ್ತಿಯ ಮೂಟೆ ಕತ್ತೆ ಮೇಲೆ ಹೊರಿಸಿದನು — ಕತ್ತೆ ಮೊದಲಿನ ಹಾಗೆ ಮಾಡಿತು — ಭಾರ ಹೆಚ್ಚಾಯಿತು — ಕತ್ತೆ ಪಾಠ ಕಲಿಯಿತು.

8. ಕೆಳಗಿನ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿ ಹೋಗಿದ್ದ ಭಾರತವನ್ನು ಒಂದು ಗೂಡಿಸಿ, ಸಂಸ್ಥಾನಗಳನ್ನು ವಿಲೀನಗೊಳಿಸಿ ಎಲ್ಲರನ್ನೂ ಒಂದೇ ಸೂರಿನಡಿಯಲ್ಲಿ ತರಲು ಶ್ರಮಿಸಿದವರು ಸರದಾರ ವಲ್ಲಭಬಾಯಿ ಪಟೇಲರು. ಕ್ರಿ.ಶ. 1947 ಅಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ವಲ್ಲಭಬಾಯಿ ಯವರು ಸ್ವತಂತ್ರ ಭಾರತದ ಪ್ರಥಮ ಗೃಹಮಂತ್ರಿಯಾದರು. ಅಖಂಡ ಭಾರತದ ನಿರ್ಮಾಣದಲ್ಲಿ ವಲ್ಲಭಬಾಯಿ ಪಟೇಲರು ಬಹುಮುಖ್ಯ ಪಾತ್ರವಹಿಸಿದರು. ಎಲ್ಲ ಸಂಸ್ಥಾನಗಳನ್ನು ಒಗ್ಗೂಡಿಸಲು ಶ್ರಮಿಸಿದರು. ಸಂಸ್ಥಾನ ವಿಲೀನಿಕರಣಕ್ಕೆ ಹೈದ್ರಾಬಾದ್ ನಿಜಾಮನು, ಜುನಾಗಡದ ನವಾಬ ಮತ್ತು

ಕಾಶ್ಮೀರದ ರಾಜ ಇವರು ಒಪ್ಪಲಿಲ್ಲ. ನಿಜಾಮನನ್ನು ಬಗ್ಗು ಬಡಿಯಲು ಸೈನ್ಯ ಪ್ರವೇಶಿಸುವಂತೆ ಮಾಡಿದರು. ಆಗ ನಿಜಾಮನು ಸಂಸ್ಥಾನಗಳ ವಿಲೀನಿಕರಣಕ್ಕೆ ಒಪ್ಪಿದನು. ಪಟೇಲರ ಸಾಹಸವನ್ನು ಕಂಡು ನವಾಬ ಮತ್ತು ಕಾಶ್ಮೀರ ರಾಜ ಹೆದರಿ ವಿಭಜನೆಗೆ ಒಪ್ಪಿಗೆ ನೀಡಿದರು. ಈ ರೀತಿಯಾಗಿ ದೇಶದ ಐಕ್ಯತೆ ಮತ್ತು ಅಖಂಡತೆಗೆ ಸರದಾರರ ಕೊಡುಗೆ ಅಪಾರವಾಗಿದೆ.

ಸರದಾರರು ದೇಶದ ಐಕ್ಯತೆಗಾಗಿ ಗಾಂಧೀಜಿಯವರ ಮಾತಿನಂತೆ ನಡೆದರು. ಗಾಂಧೀಜಿಯವರ ಹತ್ಯೆಯ ಸುದ್ದಿ ಹೇಳಿ ಮಗುವಿನಂತೆ ಅತ್ತರು. ಭಾರತದ ಐಕ್ಯತೆ ಹಾಗೂ ಸಮಗ್ರತೆಗಾಗಿ ಅಹೋರಾತ್ರಿ ಶ್ರಮಿಸಿದರು. ಬಿಡುವಿಲ್ಲದ ಕಾರ್ಯಗಳು ಹೆಚ್ಚಾಗಿ ಸರದಾರರ ದೇಹಾರೋಗ್ಯ ಕ್ಷೀಣಿಸಿತು, ತಮ್ಮ 70 ನೇ ವಯಸ್ಸಿನಲ್ಲಿ ಅಂದರೆ 15 ಡಿಸೆಂಬರ್ 1950 ರಲ್ಲಿ ಮುಂಬಯಿಯಲ್ಲಿ ವಿಧಿವಶರಾದರು. ಭಾರತವು ಕ್ರಿ.ಶ. 1991 ಜೂನ್ 17 ರಂದು ಮರಣೋತ್ತರವಾಗಿ 'ಭಾರತ ರತ್ನ' ಪುರಸ್ಕಾರವನ್ನು ನೀಡಿ ಗೌರವಿಸಿತು. ದೇಶದ ಐಕ್ಯತೆ ಹಾಗೂ ಅಖಂಡತೆಯ ಮಹಾಶಿಲ್ಪಿಯೆಂದು ಅವರ ಹೆಸರು ಚಿರಸ್ಮರಣೀಯವಾಗಿದೆ.

ಪ್ರಶ್ನೆಗಳು:

(*i*) ಭಾರತಕ್ಕೆ ಯಾವಾಗ ಸ್ವಾತಂತ್ರ್ಯ ದೊರೆಯಿತು? 1

(*ii*) ಸಂಸ್ಥಾನಗಳನ್ನು ಒಗ್ಗೂಡಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ? 1

(*iii*) ಸರದಾರರು ದೇಶದ ಐಕ್ಯತೆಗಾಗಿ ಯಾವ ಮಾತಿನಂತೆ ನಡೆದರು? 1

(*iv*) ವಲ್ಲಭಭಾಯಿ ಪಟೇಲರು ಎಷ್ಟನೇ ವಯಸ್ಸಿನಲ್ಲಿ ವಿಧಿವಶರಾದರು. 1

(*v*) ವಲ್ಲಭಭಾಯಿ ಪಟೇಲರಿಗೆ 'ಭಾರತ ರತ್ನ ಪ್ರಶಸ್ತಿ' ಯಾವಾಗ ನೀಡಿ ಗೌರವಿಸಿದರು? 1

9. ಪತ್ರ. 6

ಚಿಂಬಲ ಪಣಜಿ ಗೋವಾದ ನಾಗರಿಕರು ಶಾಲೆಗೆ ಹೋಗುವ ವಿಧ್ಯಾರ್ಥಿಗಳಿಗೆ ವಿಶೇಷವಾದ ಬಸ್ ವ್ಯವಸ್ಥೆ ಮಾಡುವಂತೆ ಸಾರಿಗೆ ಅಧಿಕಾರಿಗಳು, ಪಣಜಿ- ಗೋವಾ ಇವರಿಗೆ ಬರೆಯುವ ಮಾದರಿಯಲ್ಲಿ ಒಂದು ಮನವಿ ಪತ್ರ ಬರೆಯಿರಿ.

**ಅಥವಾ**

ರಮೇಶ/ರಾಧಾ ಹಿರೇಮಠ, ನಿಸರ್ಗ ಅಪಾರ್ಟ್‌ಮೆಂಟ, ಮನೆ ನಂ. 16, ಗಣೇಶ ಪುರಿ, ಮಾಪುಸಾದಲ್ಲಿ ವಾಸಿಸುವ/ವಳು ತನ್ನ ಗೆಳೆಯ/ಗೆಳತಿಗೆ ಹುಟ್ಟು ಹಬ್ಬದ ಶುಭಾಷಯ ತಿಳಿಸುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

10. ಕೆಳಗಿನ **ಎರಡು** ಕವಿತೆಗಳ ಸರಳ ಅರ್ಥ ಬರೆಯಿರಿ.

(ಅ) ನಷ್ಟ ಬೀಳುವದಲ್ಲ, ನಾತ ಹುಟ್ಟವದಲ್ಲ, 3
ಎಷ್ಟು ಒಯ್ದರು ಬೆಲೆ ರೊಕ್ಕವಿದಕ್ಕಿಲ್ಲ,
ಕಟ್ಟಿರುವೆಯು ತಿಂದು ಕಡಿಮೆಯಾಗುವುದಲ್ಲ,
ಪಟ್ಟಣ ದೊಳಗೆ ಪ್ರಸಿದ್ಧವಾಗಿರುವಂಥ.

(ಬ) ಚಿಗುರ ಚಿನ್ನದ ನಡುವೆ ಹೂವ ಬಯಸುವರು 3
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು
ಹಣ್ಣಿನ ಗಾತ್ರ ಪೀಚು ಎಂದವರ ಟೀಕೆ
ಇವರು ಮೆಚ್ಚುವ ವಸ್ತು ಇನ್ನಿಲ್ಲ ಜೋಕೆ.